


International Journal of Kannada Research
www.kannadajournal.com

ISSN: 2454–5813
IJKR 2017; 3(4): 17-20
© 2017 IJKR
www.kannadajournal.com
Received: 06-08-2017
Accepted: 07-09-2017

**ಡಾ. ವೆಂಕಟಗಿರಿ ದಳವಾಯಿ**
ಸಹಾಯಕ ಪ್ರಾಧ್ಯಾಪಕರು,
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಕೇಂದ್ರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦೦೦೩

**Correspondence**
**ಡಾ. ವೆಂಕಟಗಿರಿ ದಳವಾಯಿ**
ಸಹಾಯಕ ಪ್ರಾಧ್ಯಾಪಕರು,
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಕೇಂದ್ರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦೦೦೩

# ಕನ್ನಡ ಕಾದಂಬರಿಗಳಲ್ಲಿ ಚಾರಿತ್ರಿಕ ಶೋಧದ ನೆಲೆಗಳು

**ಡಾ. ವೆಂಕಟಗಿರಿ ದಳವಾಯಿ**

ಡಾ.ರಾಜಶೇಖರ ಹಳಮನಿ ಮತ್ತು ನಾನು ಒಂದೇ 'ಸ್ಕೂಲ್'ನಿಂದ ಬಂದವರು. ವಯಸ್ಸಿನಲ್ಲಿ ಕಿರಿಯನಾದರೂ, ವಿಸ್ತಾರದ ಓದು ಮತ್ತು ಗ್ರಹಿಸುವ ವಿಧಾನದಲ್ಲಿ ನನಗಿಂತ ಸೀನಿಯರ್ ಎನ್ನುವ 'ಕಾಮೆಂಟ್ ನನ್ನದು. ಅದರಿಂದಾಗಿಯೇ ನನ್ನಿಂದ ಮುನ್ನುಡಿಯ ಮಾತು ಬೇಡವೆಂದೆ. ಮತ್ತೂ ಒತ್ತಾಯಿಸಿದ. ಮುಜುಗರದಿಂದ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಿರುವೆ. ಸಾಹಿತ್ಯವನ್ನು ಗಂಭೀರವಾಗಿ ಅಭ್ಯಸಿಸಿದ ರಾಜಶೇಖರ ಎಂ.ಎ.ಯನ್ನು ಓದುವ ಸಂದರ್ಭದಲ್ಲಿಯೇ ತನಗೆ ಕಲಿಸುತ್ತಿದ್ದ, ಕೆಲವೊಬ್ಬ ಮೇಷ್ಟ್ರುಗಳಿಗಿಂತ ಮುಂದಿದ್ದ. ಈಗಲೂ ಅದನ್ನು ಕಾಯ್ದುಕೊಂಡಿರುವುದು ಸಂತೋಷದ ಸಂಗತಿಯಾಗಿದೆ. ಅರೆಕಾಲಿಕ ಉದ್ಯೋಗ ಮತ್ತು ಅಲೆಮಾರಿತನದ ಬದುಕಿನ ಒತ್ತಡದ ಮಧ್ಯೆಯೂ ಕಥೆಗಳನ್ನು ಬರೆಯಲಾರಂಭಿಸಿದ. ಗ್ರಾಮೀಣ ಪರಿಸರದಿಂದ ಬಂದ ಕಾರಣಕ್ಕಾಗಿ ಹಲವು ಕಥೆಗಳಿಗೆ ತನ್ನ ಸುತ್ತಲಿನ ಮಾದರಿಗಳನ್ನೇ 'ಪಠ್ಯ'ವನ್ನಾಗಿ ಸ್ವೀಕರಿಸಿದ. ಆದರೆ ಆ ಕಥೆಗಳನ್ನು 'ಇಸಂ'ನ ಪ್ರೇಮ್‌ನಲ್ಲಿಟ್ಟು ನೋಡುವುದು ರಾಜಶೇಖರನಿಗೆ ಕಷ್ಟದ ಕೆಲಸ. ರಾಜಶೇಖರನಿಗೆ ಬಹುದೊಡ್ಡ ಸಿದ್ಧಾಂತವೆಂದರೆ ಅವರ ಚಿಕ್ಕಪ್ಪ ಅಮರೇಶ್ ನುಗಡೋಣಿ. ಅವರ ಬದುಕು–ಆಲೋಚನಾ ಕ್ರಮದಿಂದ ಗಾಢ ಪ್ರಭಾವವನ್ನು ಹೊಂದಿದ ರಾಜಶೇಖರನಿಗೆ ಅವರ ಕಥೆಗಳೇ ಅನೇಕ ಪಠ್ಯಗಳು ಎನ್ನುವ ಭಾವನೆ ಇದೆ. 'ಬಡತನ' 'ಹಸಿವು' ಇದಕ್ಕೆ ಪೂರಕವಾದ 'ಕ್ರೌರ್ಯದ ರಸಾಯನ'ವನ್ನು ಕನ್ನಡದ ಕಥಾ ಜಗತ್ತಿಗೆ ಒಳಗು ಮಾಡುವುದು ಅಗತ್ಯದ ಕೆಲಸ ಎನ್ನುವ ನಿಲುವು ರಾಜಶೇಖರನದು. ಇದುವರೆಗೂ ಸೃಜನ ಶೀಲ ಕಥೆಗಳ ಮೂಲಕ ಮಾಡುತ್ತಿದ್ದ ಸಹಜ ಪ್ರಕ್ರಿಯೆಯ ಕೆಲಸವನ್ನು ಈಗ ರಾಜಶೇಖರ ಮಾಡುತ್ತಿಲ್ಲ ಯಾಕೆಂದರೆ ಇದು "ಶವ ಪರೀಕ್ಷೆ"ಯ ಕೆಲಸ. ಅರ್ಥಾತ್ ಸಂಶೋಧನಾ ಕಾರ್ಯ.

ಯಾವುದೇ ಒಬ್ಬ ಸೃಜನ ಶೀಲ ಬರೆಹಗಾರ "ಕಲ್ಪಿತ ವಾಸ್ತವ"ಗಳ ಗೊಡವೆಗೆ ಹೋಗಲಾರದೆ, ಸಂಶೋಧನಾ ಶಿಸ್ತಿಗೆ ತೊಡಗುವ ಸಂದರ್ಭದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದು ಭಾಷಿಕ ವಿನ್ಯಾಸಕ್ಕೆ ಸಂಬಂಧಿಸಿರಬಹುದು ಅಥವಾ ಗ್ರಹಿಕೆಗೆ ಸಂಬಂಧಿಸಿರಬಹುದು. ಇಲ್ಲವೇ ಅದರಾಚೆಯ 'ನಿತಾಂತ'ಕ್ಕೆ ಸಂಬಂಧಿಸಿರಬಹುದು. ಭಾವಕೋಶದಿಂದ ಬುದ್ಧಿ ಕೋಶಕ್ಕೆ ಜಿಗಿಯುವ ಇಂತಹ ಪ್ರಯತ್ನ ಸಾಕಷ್ಟು ಹಿಂಜರಿಕೆಗಳಿಂದಲೇ ಕೂಡಿರುತ್ತೆ. ಭಾವ ಪ್ರಾಧಾನ್ಯತೆಗೆ ಅವಕಾಶವಿರದ ಈ ಬುದ್ಧಿ ಪ್ರಾಧಾನ್ಯತೆಯ ಶಿಸ್ತಿಗೆ ಒಳಗಾದ ರಾಜಶೇಖರನ ಅಧ್ಯಯನ ಮೇಲೆ ಚರ್ಚಿಸಿದ ಬಿಕ್ಕಟ್ಟುಗಳನ್ನು ಸಹಜವಾಗಿಯೇ ಎದುರಿಸಿದೆ ಎನ್ನುವ ಅಭಿಪ್ರಾಯ ನನ್ನದು.

ಕನ್ನಡ ಸಂದರ್ಭದ ಹದಿಮೂರು ಕಾದಂಬರಿಗಳನ್ನು (ಇಂದಿರಾಬಾಯಿ, ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ, ಚೋಮನದುಡಿ, ಮರಳಿ ಮಣ್ಣಿಗೆ, ಗಂಗವ್ವ–ಗಂಗಾಮಾಯಿ, ಮುಸ್ಸಂಜೆಯ ಕಥಾ ಪ್ರಸಂಗ, ಪರಸಂಗದ ಗೆಂಡೆತಿಮ್ಮ, ಬೀಜ, ಮಾಡಿ ಮಡಿದವರು, ಶಾಮಣ್ಣ, ಬದುಕು, ಹವನ) ಪ್ರಾತಿನಿಧಿಕವಾಗಿ ಆಯ್ಕೆ ಮಾಡಿಕೊಂಡು ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧವಿದು. ಇದರ ಮಾರ್ಗದರ್ಶಕರು ಡಾ.ಮಲ್ಲಿಕಾ ಘಂಟಿಯರು (ನನ್ನ ಮಾರ್ಗದರ್ಶಕರೂ ಸಹ) 'ಚಳುವಳಿ' 'ಸಿದ್ಧಾಂತ'ಗಳ ಪರಿಚಯವಿರದ ರಾಜಶೇಖರನಿಗೂ ಮತ್ತು ನನಗೂ 'ಗರಡಿಯ ಮನೆ' ಯೆಂದರೆ ಮೇಡಂ ರವರ ಸಾಮೀಪ್ಯವೇ ! ಅವರನ್ನು ಸಮೀಪದಿಂದ ಕಂಡವರಲ್ಲಿ ನಾವಿಬ್ಬರಿದ್ದೇವೆ. ಮೇಡಂರವರು ವೈಯಕ್ತಿಕವಾಗಿ ನಮ್ಮನ್ನು ಇಷ್ಟಪಡುತ್ತಾರೆ ಹೊರತು ನಮ್ಮ ಬರವಣಿಗೆಯನ್ನಲ್ಲ. ಅವರ ನಿರೀಕ್ಷೆಗಳಿಗೆ ತಕ್ಕಂತೆ ಬೆಳೆಯಲಿಲ್ಲ ಎನ್ನುವ ಬೇಸರ ನಮ್ಮಿಬ್ಬರಲ್ಲೂ ಇದೆ. ಈ ಮಾತನ್ನು 'ಥೀಸಿಸ್'ಗೂ ಅನ್ವಯಿಸಿ ಹೇಳಬಹುದು. ಅಧ್ಯಯನಗಳೆಂದರೆ 'ಸಾಮಾಜಿಕ ಜವಾಬ್ದಾರಿ' ಯೆಂದು ನಂಬಿರುವ ಮಲ್ಲಿಕಾ ಮೇಡಂರವರು ಬರವಣಿಗೆಗೆ ಒಂದು ನಿಷ್ಠುರತೆ ಇರಬೇಕೆಂದು ಬಯಸುತ್ತಾರೆ. ಭಾಷೆಗೆ ಶಕ್ತಿ ಬರುವುದೇ ಆಗ ಎನ್ನುವ ಅಭಿಪ್ರಾಯ ಅವರದು.

ಇದು ಸಾಧ್ಯವಾಗದಿದ್ದಾಗ ರಾಜಶೇಖರ ಬೇಸರ ಪಟ್ಟುಕೊಳ್ಳುತ್ತಿದ್ದ. ಪುನಃ ಬರೆದು ಸಮರ್ಥಿಸಿಕೊಳ್ಳುತ್ತಿದ್ದ. ಮಾತನ್ನು, ವಿಮರ್ಶೆಯ ಶಿಸ್ತಿಗೆ, ಸಂಶೋಧನಾ ಶಿಸ್ತಿಗೆ ಒಳಪಡಿಸುವ ಸಂದರ್ಭದಲ್ಲೆಲ್ಲಾ ಈ ರೀತಿಯ ತೊಡಕುಗಳಿರುತ್ತವೆ. ಅಂತಹ ತೊಡಕುಗಳನ್ನು ಮೀರುವ ಪ್ರಯತ್ನವನ್ನು ರಾಜಶೇಖರ ಇಲ್ಲಿ ಮಾಡಿದ್ದಾನೆ.

ಸ್ವಾತಂತ್ರ್ಯ ಪೂರ್ವದ 'ಇಂದಿರಾಬಾಯಿ' ಯಿಂದ ಇತ್ತೀಚಿನ 'ಬದುಕು' ಕಾದಂಬರಿಯಲ್ಲಿ ಬರುವ ಮೂರು ತಲೆಮಾರುಗಳ ಸಂಘರ್ಷವನ್ನು 'ಕನ್ನಡ ಕಾದಂಬರಿಗಳಲ್ಲಿ ತಲೆಮಾರುಗಳ ಸಂಘರ್ಷ ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನ ಮಾಡಲಾಗಿದೆ. ಮೊದಲ ಸಾಮಾಜಿಕ ಕಾದಂಬರಿಯಾದ 'ಇಂದಿರಾಬಾಯಿ'ಯ ಕಾಲ ೧೮೯೯ ಕೊನೆಯ ಕಾದಂಬರಿಯಾದ 'ಬದುಕು' ಕಾದಂಬರಿಯ ಕಾಲ ೨೦೦೧. ಅಂದರೆ ಒಂದು ಶತಮಾನದ ಅವಧಿಯಲ್ಲಿ ಬಂದಂತಹ ಕಾದಂಬರಿಗಳನ್ನು ಅಧ್ಯಯನ ಮಾಡಿ ಸರಿ ಸುಮಾರು ೨೦೦ ವರ್ಷಗಳ ಚರಿತ್ರೆಯನ್ನು ಕಂಡುಕೊಂಡ ಹಾಗೇ ! 'ವಸಾಹತು ಶಾಹಿ' ಮತ್ತು 'ಆಧುನಿಕತೆ' ಎಂಬ ತಾತ್ವಿಕತೆಯನ್ನಿಟ್ಟುಕೊಂಡು ಭಾರತೀಯ ಸಮಾಜದ, ಕನ್ನಡ ಜಗತ್ತಿನ ಸಂಭ್ರಮ ಮತ್ತು ತಲ್ಲಣಗಳನ್ನು ಗುರುತಿಸುವ ಪ್ರಯತ್ನಕ್ಕೆ ತೊಡಗಿಸಿಕೊಂಡ ಈ ಮಹಾಪ್ರಬಂಧ, ಸಂಘರ್ಷದ ನೆಲೆಯನ್ನು ಪ್ರಧಾನ ಆಶಯವನ್ನಾಗಿಸಿಕೊಂಡಿದೆ. ಈ ಸಂಘರ್ಷವೂ ಮೂರು ತಲೆಮಾರುಗಳಿಗೆ ಸಂಬಂಧಿಸಿದ್ದು ಅಥವಾ ಮೂರು ಕಾಲಗಳಿಗೆ ಸಂಬಂಧಿಸಿದ್ದು. ಆ ಕಾಲದ ಮನುಷ್ಯನ ತವಕ–ತಲ್ಲಣಗಳನ್ನು ಒಂದು ಸಂಕಥನವು ಗತ ತಾರ್ಕಿಕತೆಯ ನೆಲೆಯಲ್ಲಿಯೇ ತಲ್ಲಣಗಳನ್ನು ಒಂದು ಸಂಕಥನವು ಗತ ತಾರ್ಕಿಕತೆಯ ನೆಲೆಯಲ್ಲಿಯೇ ಚರ್ಚಿಸುತ್ತದೆ ಎನ್ನುವ ಪ್ರಾಥಮಿಕ ತಿಳುವಳಿಕೆಯೊಂದಿಗೆ ಈ ಪ್ರಬಂಧ ವಿಸ್ತರಿಸಿಕೊಳ್ಳುತ್ತದೆ. ಈ ಮಹಾಪ್ರಬಂಧದಲ್ಲಿ ಆರು ಅಧ್ಯಾಯಗಳಿವೆಯಾದರೂ, ಅದರಲ್ಲಿ ಪ್ರಮುಖ ಅಧ್ಯಾಯವೆಂದರೆ 'ಕಾದಂಬರಿಗಳಲ್ಲಿ ತಲೆಮಾರುಗಳ ಸಂಘರ್ಷ' ಎಂಬುದು. ಉಳಿದ ನಾಲ್ಕು ಅಧ್ಯಾಯಗಳು ತಾತ್ವಿಕ ಚೌಕಟ್ಟಿನ ಪ್ರವೇಶಿಕೆಯಂತೆ ಕಂಡರೆ, ಸಮಾರೋಪವು ಕೆಲ ಫಲಿತಗಳನ್ನು ಮಂಡಿಸುತ್ತದೆ.

ಪ್ರಧಾನ ಚರ್ಚೆಗಳನ್ನು ವಿವರಿಸುವ ಪೂರ್ವದಲ್ಲಿ ರಾಜಶೇಖರ ಆಯ್ದುಕೊಂಡಿರುವ ಕಾದಂಬರಿಕಾರರ ಮತ್ತು ಕಾದಂಬರಿಗಳ ಕುರಿತು ಒಂದೆರಡು ಮಾತುಗಳನ್ನು ಹೇಳಬೇಕೆನಿಸುತ್ತದೆ. ನವೋದಯ ಪೂರ್ವ, ನವೋದಯ, ಪ್ರಗತಿಶೀಲ, ದಲಿತ–ಬಂಡಾಯ ಕಾಲಘಟ್ಟದಲ್ಲಿ ರಚನೆಗೊಂಡ ಈ ಕಾದಂಬರಿಗಳು, ಕಾದಂಬರಿ ಪ್ರಕಾರದಲ್ಲಿಯೇ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿವೆ. ಮತ್ತೊಂದು ವಿಶೇಷತೆಯೆಂದರೆ ಮೂರು ತಲೆಮಾರುಗಳಿಗೆ ಸಂಬಂಧಿಸಿದ ಕಾದಂಬರಿಕಾರರೂ ಇವರಾಗಿದ್ದಾರೆ. ಮೊದಲ ತಲೆಮಾರಾಗಿ ಗುಲ್ವಾಡಿ, ಎರಡನೇ ತಲೆಮಾರಾಗಿ ಕುವೆಂಪು, ಮೂರನೆ ತಲೆಮಾರಾಗಿ ಕುಂ.ವೀ. ಹಾಗೇ ಇವರೆಲ್ಲರೂ ಸಾಮಾಜಿಕವಾಗಿ ಭಿನ್ನ ಸ್ತರಗಳಿಗೆ ಸೇರಿದವರು. ಗುಲ್ವಾಡಿಯವರು ಸಾರಸ್ವತ ಬ್ರಾಹ್ಮಣರು, ಕುವೆಂಪುರವರು ಒಕ್ಕಲಿಗರು, ಶಾಂತಿನಾಥ ದೇಸಾಯಿಯವರು ಜೈನರು, ಕುಂ.ವೀ. ಅವರು ಕುಂಬಾರರು, ಗೀತಾ ನಾಗಭೂಷಣ ಅವರು ಗಂಗಾ ಮತಸ್ಥರು. ಇವರೆಲ್ಲರೂ ಭಿನ್ನ ಜಾತಿ–ಸಂಸ್ಕೃತಿಗಳ ಮಧ್ಯೆಯೇ ಸಾಮಾಜಿಕ ಸುಧಾರಣೆಯನ್ನು ಬಯಸಿದಂತಹವರು. ಉದಾಹರಣೆ ಗುಲ್ವಾಡಿ ವೆಂಕಟರಾಯರು ವಸಾಹತು ಶಾಹಿಯ ರೂಪವಾದ ಇಂಗ್ಲೀಷ್ ಶಿಕ್ಷಣವನ್ನು ಕರ್ನಾಟಕದಲ್ಲಿ ಮೊಟ್ಟ ಮೊದಲಿಗೆ ಪಡೆದ ಜನಾಂಗದವರು. ಮೇಲ್‌ಸ್ತರದ ಅಧಿಕಾರಿಗಳಾಗಿ ಬ್ರಿಟೀಷರಿಂದಲೇ ಗೆಝೆಟೆರಿಯನ್‌ಗಳಲ್ಲಿ ಭವಿಷ್ಯದೆಡೆಗಿನ ದೃಷ್ಟಿಕೋನವನ್ನಿಟ್ಟುಕೊಂಡವರು ಎಂಬ ಪ್ರಶಂಸೆಗೆ ಒಳಗಾದವರು. ಈ ತಿಳುವಳಿಕೆಯನ್ನು ತಮ್ಮ ಮೊದಲ ಕಾದಂಬರಿಯಲ್ಲಿಯೇ ಗುಲ್ವಾಡಿ ಅವರಿಗೆ ಅಭಿವ್ಯಕ್ತಿಪಡಿಸಲು ಸಾಧ್ಯವಾಯ್ತು. ಮದುವೆಯಾದ ದಿನದಿಂದಲೇ ವಿಧವೆಯಾದ 'ಇಂದಿರಾ' ತಲೆಬೋಳಿಸಿಕೊಳ್ಳುವುದನ್ನು ವಿರೋಧಿಸುತ್ತಾಳೆ. ಹೆತ್ತವರು ಬೇಡವೆಂದರೂ ಪುಸ್ತಕಗಳನ್ನು ಓದುತ್ತಾಳೆ. ಮುಂದೆ ಪುನಃ ವಿವಾಹವಾಗಿ ಸಂಸ್ಕೃತ, ಮರಾಠಿ ಹಾಗೂ ಇಂಗ್ಲೀಷ್‌ನಲ್ಲಿ ಪದವಿಯನ್ನು ಪಡೆಯುತ್ತಾಳೆ. ಹೀಗಾಗಿ ಗುಲ್ವಾಡಿಯವರು ಹೆಣ್ಣನ್ನು ಕೇಂದ್ರ ಅಸ್ತಿತ್ವವನ್ನಾಗಿಸಿ, ಆಕೆಗೆ ಶಿಕ್ಷಣ ಮತ್ತು ಲೈಂಗಿಕ ಅವಕಾಶವನ್ನು ಕಲ್ಪಿಸಿಕೊಡುತ್ತಾರೆ. ಇದನ್ನು ವಿರೋಧಿಸುವ ಸಮಾಜಕ್ಕೆ, ಧರ್ಮಗುರುಗಳಿಗೆ, ಶಾಸ್ತ್ರಗಳನ್ನೇ ಆಧರಿಸಿ, ಉತ್ತರಿಸುತ್ತಾರೆ. ಇನ್ನು ಕುವೆಂಪುರವರು ನವೋದಯ ಸಂದರ್ಭದ ಮೊದಲ ಅಬ್ರಾಹ್ಮಣ ಕವಿ. ಮನುಜಮತದೊಂದಿಗೆ ನವೋದಯದ ಆಚೆಗೂ ಬೆಳೆದು ನಿಂತ ಮಾದರಿ. ಕಾರಂತರೂ ಅಷ್ಟೇ ೧೯೩೩ರ ಸಮಯದಲ್ಲಿಯೇ ದಲಿತ ಸಂವೇದನೆಯ ಕಾದಂಬರಿಯನ್ನು ಭಾರತೀಯ ಸಾಹಿತ್ಯಕ್ಕೆ ಕೊಟ್ಟವರು. ಅಲ್ಲದೇ ಆ ಕಾದಂಬರಿಯನ್ನು ಭಾರತೀಯ ಸಾಹಿತ್ಯಕ್ಕೆ ಕೊಟ್ಟವರು. ಅಲ್ಲದೇ ಆ ಕಾಲದಲ್ಲಿಯೇ ಅಂತರ್‌ಜಾತೀಯ ವಿವಾಹವನ್ನು ಮಾಡಿಕೊಂಡವರು. ಇನ್ನು ಬಸವರಾಜ ಕಟ್ಟೀಮನಿಯವರು ಪ್ರಗತಿಶೀಲ ಪಂಥದಲ್ಲಿ ಚೈತನ್ಯ ವಾದವನ್ನು ಪ್ರತಿಪಾದಿಸಿದಂತವರು. ತಮ್ಮ ಸ್ವಜಾತಿ 'ಜಗದ್ಗುರು'ಗಳ ಮುಖವಾಡಗಳನ್ನು ಕಳಚಿ, ಹಲ್ಲೆಗೆ ಒಳಗಾದವರು. ಲಂಕೇಶ್‌ರಂತೂ ಪ್ರಭುತ್ವವನ್ನು ಒಂದು ಅಂತರದಿಂದ ನೋಡಿದವರು. ಒಬ್ಬ ದಲಿತನ ಪಾದಗಳನ್ನು ಮೇಲ್ವರ್ಗದ ಗೌಡನಿಂದ ತೊಳಿಸಿದಂತಹವರು (ಸಹಪಾಠಿ ಕಥೆ). ಭುಜಂಗಯ್ಯನ ದಶಾವತಾರದ ಮೂಲಕ ಮಠೀಯ ವ್ಯವಸ್ಥೆಯನ್ನು ಅಲುಗಿಸಿದವರು ಆಲನಹಳ್ಳಿ ಕೃಷ್ಣ. ಹೆಣ್ಣಿನ ಶೋಷಣೆಯನ್ನು 'ಮಾಪುರ ತಾಯಿ ಮಕ್ಕಳು' ಕಾದಂಬರಿಯಲ್ಲಿ ಅನಾವರಣಗೊಳಿಸಿದವರು ಗೀತಾ ನಾಗಭೂಷಣ ಅವರು. ಕೊಟ್ರೇಶ್‌ನನ್ನು ಹೈಸ್ಕೂಲ್ ಸೇರಿಸಿದ ಕುಂ.ವೀ., ಸಂತೆಯ ಬದುಕನ್ನು ಬಿಚ್ಚಿಟ್ಟ ಮಲ್ಲಿಕಾರ್ಜುನ ಹಿರೇಮಠರು ತಮ್ಮ ಕಾದಂಬರಿಯ ವಸ್ತು ಭಾಷೆ ಆಶಯಗಳ ಮೂಲಕ ಕನ್ನಡ ಕಾದಂಬರಿಗಳಿಗೆ ಹೊಸ ಅರ್ಥವನ್ನು ತಂದು ಕೊಟ್ಟವರು. ಇಂಗ್ಲೀಷ್ ಶಿಕ್ಷಣದ ಆಧುನಿಕತೆಯ ಫಲವಾಗಿ ಹುಟ್ಟಿಕೊಂಡ ಈ ಪ್ರಕಾರ ಬಹುಸಂಸ್ಕೃತಿಗಳ ಮೇಲೆ ಬೀರಿರುವ ಪರಿಣಾಮವನ್ನು ಮತ್ತು ಆ 'ಈಡುಬಿಣುಂಟಿ'ನ ಒಳಗಿರುವ ಭಾರತವನ್ನು ಕಂಡುಕೊಳ್ಳುವಲ್ಲಿ ಈ ಕಾದಂಬರಿಗಳು ಯಶಸ್ವಿಯಾಗಿವೆ ಎನ್ನುವುದನ್ನು ಮರೆಯುವಂತಿಲ್ಲ.

ರಾಜಶೇಖರನ 'ಪಠ್ಯಗಳ ಆಯ್ಕೆ' ಮತ್ತು ಚರ್ಚೆಗಳನ್ನು ಗಮನಿಸಿದಾಗ ಫ್ರೆಡರಿಕ್ ಜೇಮ್ಸ್‌ನ ಹೇಳಿಕೆ ನಿಜವೆನಿಸುತ್ತದೆ. ಜೇಮ್ಸ್ ಹೇಳುವುದೇನೆಂದರೆ, "ಎಲ್ಲ ತೃತೀಯ ಜಗತ್ತಿನ ಪಠ್ಯಗಳೂ ಒಂದು ನಿರ್ದಿಷ್ಟ ರೀತಿಯಲ್ಲಿ ರೂಪಕಗಳಾಗಿವೆ. ಹಾಗೂ ಅವುಗಳನ್ನು ನಾನು ರಾಷ್ಟ್ರೀಯ ರೂಪಕಗಳೆಂದು ಕರೆಯುತ್ತೇನೆ. ಕಾದಂಬರಿಗಳಂತಹ ರೂಪ ಪಾಶ್ಚಿಮಾತ್ಯ ಪ್ರತಿನಿಧಿತ್ವದ ಸಲಕರಣೆಗಳಿಂದ ಅಭಿವೃದ್ಧಿಗೊಂಡಿದ್ದರೂ, ಅವುಗಳನ್ನು ರಾಷ್ಟ್ರೀಯ ರೂಪಗಳೆಂದೇ ಓದಿಕೊಳ್ಳಬೇಕು." ರಾಜಶೇಖರ ಬಳಸಿಕೊಂಡ ಕಾದಂಬರಿಗಳೆಲ್ಲವೂ ಜೇಮ್ಸ್ ಹೇಳುವ ಸ್ವರೂಪವನ್ನೇ ಹೊಂದಿವೆ. ಈ ಕಾದಂಬರಿ ಜಗತ್ತಿನ ಒಳಹೊಕ್ಕಾಗ ಕಾಣುವ ದೃಶ್ಯಗಳೇ ಬೇರೆ ಎನ್ನುವ ವಾದ ರಾಜಶೇಖರನದು. ಅದೊಂದು 'ಸಂಘರ್ಷದ ರೂಪ' ಎನ್ನುವುದು ಇಲ್ಲಿಯ ಅಧ್ಯಯನಗಳ ನಿರ್ವಚನವಾಗಿದೆ. ಒಂದು ತಲೆಮಾರುಗಳಲ್ಲಿ ನಡೆಯುವ ಸಾಂಸ್ಕೃತಿಕ ಪಲ್ಲಟಗಳನ್ನು ಅದರ ಅಪಮೌಲ್ಯೀಕರಣವನ್ನು ಒಂದು ಚರಿತ್ರೆಯ ರೂಪದಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಅಲ್ಲದೇ ಕನ್ನಡದ

ಮೊದಲ ಕಾದಂಬರಿಗಳ ಚಲನೆಯ ಕುರಿತಾಗಿ ಡಾ.ಶಿವರಾಮ್ ಪಡಿಕ್ಕಲ್ ಎತ್ತಿರುವ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವ ಪ್ರಯತ್ನವನ್ನೂ ರಾಜಶೇಖರ ಈ ಮಹಾಪ್ರಬಂಧದಲ್ಲಿ ಮಾಡಿದ್ದಾರೆ. ಪಡಿಕ್ಕಲ್‌ರವರು ಎತ್ತುವ ಪ್ರಶ್ನೆಯೆಂದರೆ "ಕನ್ನಡದ ಮೊದಲ ಕಾದಂಬರಿಗಳು ಮೇಲ್ಜಾತಿಯ ಇಂಗ್ಲೀಷ್ ಶಿಕ್ಷಿತ ವರ್ಗದವರ ಸಮಸ್ಯೆಗಳು, ಆಸೆ ಆಕಾಂಕ್ಷೆಗಳು ಹಾಗೂ ಆತಂಕಗಳನ್ನು ಮಾತ್ರ ಬಿಂಬಿಸುತ್ತವೆ. ಆದರೆ ಕೆಳಜಾತಿಯವರ ಮತ್ತು ಇತರೆ ಸಮುದಾಯಗಳ ಅನುಭವಗಳು, ಸಂಘರ್ಷಗಳು ಹಾಗೂ ಆಸೆ ಆಕಾಂಕ್ಷೆಗಳ ಬಗೆಗೆ ಈ ಸಾಹಿತ್ಯ ಪ್ರಕಾರ ಮೌನವಾಗಿದೆ" ಎಂಬುದು. ಮೊದಲ ಸಾಲಿನ ಕಾದಂಬರಿಗಳ ಆಕಾಂಕ್ಷೆಗಳ ಬಗೆಗೆ ಈ ಸಾಹಿತ್ಯ ಪ್ರಕಾರ ಮೌನವಾಗಿದೆ" ಎಂಬುದು. ಮೊದಲ ಸಾಲಿನ ಕಾದಂಬರಿಗಳ ಮಿತಿಯನ್ನು ಈ ಮಾತುಗಳು ಹೇಳುತ್ತಿವೆಯಾದರೂ, ಆ ವರ್ಗವನ್ನು ನಮ್ಮ ಕಾದಂಬರಿಗಳು ಕಡೆಗಣಿಸಿಲ್ಲ ಎನ್ನುವ ಚರ್ಚೆಯನ್ನು ರಾಜಶೇಖರ ಕೈಗೆತ್ತಿಕೊಂಡಿದ್ದಾರೆ. ಏಕೆಂದರೆ ಇಲ್ಲಿ ಸಂಘರ್ಷ ಉಂಟಾಗುವುದು ಸ್ವಕೀಯ ನೆಲೆಯಲ್ಲಿಯೇ ! ಪ್ರಾದೇಶಿಕವಾದಂತಹ ಹೊಸ ಅಧಿಕಾರದ ನೆಲೆಗಳು ತಮ್ಮ ತಮ್ಮ ಸಮುದಾಯಗಳಲ್ಲಿಯೇ ಸಾಂಸ್ಕೃತಿಕ ಮತ್ತು ಆರ್ಥಿಕ ಒತ್ತಡಗಳನ್ನು ಉಂಟು ಮಾಡಿ ಸಮಾಜದ ರೂಪಾಂತರಗಳಿಗೆ ಕಾರಣವಾಗುತ್ತಿರುವುದನ್ನು ತುಂಬಾ ಸ್ಪಷ್ಟವಾಗಿ ರಾಜಶೇಖರ ಗುರುತಿಸುತ್ತಾರೆ.

ಇನ್ನು ಪ್ರಧಾನ ಅಧ್ಯಾಯದ ಕುರಿತು ಹೇಳುವುದಾದರೆ, ಬ್ರಿಟಿಷರ ಆಡಳಿತ ಮತ್ತು ಅದರ ಭೌತಿಕ ಸ್ವರೂಪವಾದ 'ಆಧುನಿಕತೆ'ಯು "ಶ್ರೀ ಸಾಮಾನ್ಯನ ನಿರ್ಜೀವತೆಯನ್ನು ಸಜೀವಗೊಳಿಸುವ ಜಾತಿ ವ್ಯವಸ್ಥೆಯನ್ನು ಪೋಷಿಸುವ ಪರಂಪರೆಯನ್ನು ಅಲ್ಲಾಡಿಸುವ ಪ್ರಕ್ರಿಯೆ"ಯನ್ನು ಉಂಟು ಮಾಡಿದೆ. ಈ ಬದಲಾವಣೆಯ ಸಂದರ್ಭದಲ್ಲಿ ಉಂಟಾದ ಸಂಘರ್ಷವನ್ನು ತಾವು ಆಯ್ಕೆ ಮಾಡಿಕೊಂಡ ಹದಿಮೂರು ಕಾದಂಬರಿಗಳು ಚಿತ್ರಿಸುತ್ತವೆ ಎನ್ನುವ ಅಭಿಪ್ರಾಯ ರಾಜಶೇಖರನದು. ಸಂಘರ್ಷದ ವಿವಿಧ ಆಯಾಮಗಳು ಉಪ ಶೀರ್ಷಿಕೆಯಡಿಯಲ್ಲಿ ಗುರುತಿಸುತ್ತಾರೆ. ಅವುಗಳೆಂದರೆ "ಶಿಕ್ಷಣ ಮತ್ತು ಆಧುನಿಕತೆಯ ಸಂಘರ್ಷ", "ರಾಷ್ಟ್ರೀಯತೆ ಮತ್ತು ಸಂಘ", "ಜಮೀನ್ದಾರಿಕೆ ಮತ್ತು ಸಂಘರ್ಷ", "ಜಾಗತೀಕರಣ ಮತ್ತು ಸಂಘರ್ಷ", "ಮಹಿಳೆಯರ ಅಸ್ತಿತ್ವ ಮತ್ತು ಸಂಘರ್ಷ." ಎಂಬ ಉಪಶೀರ್ಷಿಕೆಗಳಡಿ ತಲೆಮಾರುಗಳನ್ನು ಮುಖಾಮುಖಿಗೊಳಿಸುತ್ತಾರೆ. ಒಂದೆಡೆ ಅಕ್ಷರವೆನ್ನುವುದು ಕೆಳವರ್ಗದವರಿಗೆ ಬಿಡುಗಡೆ ಎಂದೆನಿಸಿದರೆ, ಮೇಲ್ವರ್ಗದವರಿಗೆ ಆತಂಕವನ್ನುಂಟು ಮಾಡುತ್ತದೆ. ಮಾರ್ಕ್ಸ್ ಮತ್ತು ಅಂಬೇಡ್ಕರ್‌ರ ವಾದಗಳ ವೈಜ್ಞಾನಿಕತೆಯನ್ನು ಈ ಸಂದರ್ಭದಲ್ಲಿ ಸರಿಯಾಗಿ ಬಳಸಿಕೊಂಡು ಒಂದು ಸೈದ್ಧಾಂತಿಕ ನಿಲುವಿಗೆ ಸಂಶೋಧಕರು ಬರುತ್ತಾರೆ. "ಒಂದು ಕಡೆ ಪ್ರಾಥಮಿಕ ಶಿಕ್ಷಣ ಪಡೆಯಲು ಅಸಹಾಯಕ ಸ್ಥಿತಿಯಲ್ಲಿರುವ ತಲೆಮಾರು, ಅಕ್ಷರ ಪಡೆದು ಅನಾಥವಾದ ತಲೆಮಾರು, ಅಭಿವೃದ್ಧಿಯೊಂದಿಗೆ ಗುರುತಿಸಿಕೊಂಡು ಮುನ್ನುಗ್ಗುತ್ತಿರುವ ಮೇಲ್ವರ್ಗದ ಹೊಸ ತಲೆಮಾರು ಪರಸ್ಪರ ಪ್ರತ್ಯೇಕಗೊಂಡ ನೆಲೆಯನ್ನು ಜಾಗತೀಕರಣ ಸಂದರ್ಭದಲ್ಲಿ ಗುರುತಿಸುತ್ತಾರೆ.

ಒಟ್ಟಾರೆ ರಾಜಶೇಖರನ ನಿಲುವುಗಳನ್ನು ಗುರುತಿಸುವಾಗ, ವೈದಿಕ ಸಮುದಾಯದ 'ಅಸ್ತಿತ್ವ'ದ ಪ್ರಶ್ನೆಯೇ ನನಗೆ ಮುಖ್ಯವೆನಿಸುತ್ತದೆ. ಹೊಸ ಧರ್ಮದ ಪ್ರವೇಶ, ಅದರಿಂದಾಗಿ ಎಚ್ಚೆತ್ತುಕೊಂಡ ಸುಧಾರಣಾವಾದವನ್ನು ವಸಾಹತುಶಾಹಿಯ ಮಾನದಂಡದಿಂದಲೇ ವಿಶ್ಲೇಷಿಸಬೇಕಾಗುತ್ತದೆ. ಹಾಗೇ ನೋಡಿದರೆ ಸನಾತನ ಧರ್ಮಿಯರಿಗೆ ಇದು ಹೊಸದಲ್ಲ. ಅದನ್ನು ಜೀರ್ಣಿಸಿಕೊಳ್ಳುವ, ಅಪೋಶನ ತೆಗೆದುಕೊಳ್ಳುವ ತಂತ್ರಗಳನ್ನು ಕಾಲದಿಂದ ಕಾಲಕ್ಕೆ ಅದು ಬದಲಾಯಿಸಿಕೊಳ್ಳುತ್ತಲೇ, ಬಂದಿದೆ. ಉದಾಹರಣೆ : ಹೋಟೇಲ್. ಒಂದು ಕಾಲದಲ್ಲಿ 'ಅನ್ನ' ಮಾರುವುದು ಅತ್ಯಂತ ಪಾಪದ ಕೆಲಸ ಎಂದು ಭಾವಿಸಲಾಗಿತ್ತು. ಯಾವಾಗ ಅದು ಉದ್ಯಮವಾಯಿತೋ ಅದು ಕೈ ಸೇರಿದ್ದೇ ಈ ಪಾಪದ ಹೇಳಿಕೆಯನ್ನು ಕೊಟ್ಟವರ ಕೈಗೇ ! ಹೀಗೆ ಬಹುಬೇಗನೆ ಅಸ್ತಿತ್ವವನ್ನು ಕಂಡುಕೊಳ್ಳುವ ವೈದಿಕತನ, ಕೆಳಸಮುದಾಯಗಳಿಗೆ ದಕ್ಕಲಿಲ್ಲ. ಅಂದಾಕ್ಷಣ ಅದಕ್ಕೆ ಅಸ್ತಿತ್ವದ ಚರಿತ್ರೆ ದಕ್ಕಲಿಲ್ಲ. ಅಂದಾಕ್ಷಣ ಅದಕ್ಕೆ ಅಸ್ತಿತ್ವದ ಚರಿತ್ರೆ ಇಲ್ಲ ಎಂದು ಭಾವಿಸಬೇಕಾಗಿಲ್ಲ. ಬುದ್ಧನಷ್ಟೇ ಮಹೋನ್ನತವಾದ ಚರಿತ್ರೆ ಅದಕ್ಕಿದೆ. ನಮ್ಮ ಸಂದರ್ಭಕ್ಕೆ ಬ್ರಿಟೀಷರ ಎರಡು ನೀತಿಗಳಾದ 'ಶಿಕ್ಷಣ' ಮತ್ತು 'ನಗರೀಕರಣ'ವು ತಳಸಮುದಾಯಗಳಿಗೆ ಬಹುದೊಡ್ಡ ಅಸ್ಮಿತೆಯನ್ನು ತಂದುಕೊಟ್ಟವೆ. ತಳವರ್ಗದ ಸಾಂಸ್ಕೃತಿಕ ಅಧ್ಯಾಯಗಳಿಗೆ ಇವುಗಳು 'ಮುನ್ನುಡಿ' ಎನ್ನಬೇಕು. ಆ ಮುನ್ನಡಿಯನ್ನು ಓದಿಯೇ ಡಾ.ಬಾಬಾಸಾಹೇಬ ಬೆಳದದ್ದು. ಕುವೆಂಪು ಮಹಾಕವಿಯಾದದ್ದು. ಇಲ್ಲದಿದ್ದರೆ ಸ್ವತಃ ಕುವೆಂಪು ಈ ರೀತಿಯಾಗಿ ಹೇಳಿಕೊಳ್ಳುತ್ತಿರಲಿಲ್ಲ. "ಇಂಗ್ಲೀಷ್‌ನವರು ಇಂಡಿಯಾಕ್ಕೆ ಬರದಿದ್ದರೆ ನಾನು ಕುಪ್ಪಳ್ಳಿಯಲ್ಲಿ ಸಗಣಿ ತಟ್ಟಿಕೊಂಡು ಬ್ರಾಹ್ಮಣರ ಗದ್ದೆ ಉತ್ತುಕೊಂಡಿರುತ್ತಿದ್ದೆ. ಅವರೊಡನೆ ಕ್ರೈಸ್ತ ಮಿಶನರಿಗಳು ಬರದಿದ್ದರೆ ನಾನು ಶ್ರೀರಾಮಾಯಣ ದರ್ಶನಂ ಬರೆದ ಕವಿಯಾಗುತ್ತಿರಲಿಲ್ಲ. ವೈದಿಕ ಮತ ಮೌಢ್ಯದ ಕೆಸರು ಸಂದಿಯಲ್ಲಿ ಒದ್ದಾಡುವ ಮೂಡ ಶೂದ್ರ ಹಂದಿಯಾಗಿರುತ್ತಿದ್ದೆ." ಇಂತಹ ಹೇಳಿಕೆಗಳ ಹಿನ್ನೆಲೆಯಲ್ಲಿ ವಸಾಹತುಶಾಹಿಯ ಸ್ವರೂಪದ ಪರಿಣಾಮಗಳನ್ನು ಮುಖ್ಯ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ತಲೆಮಾರುಗಳ ಸಂಘರ್ಷ ಉಂಟಾದದ್ದು, ಯಾರು ಇದುವರೆಗೂ ಭೂಮಿಯ ಒಡೆಯರಾಗಿದ್ದರೋ, ಯಾರು ಇದುವರೆಗೂ ವಿದ್ಯಾ ವಾಚಸ್ಪತಿಗಳಾಗಿದ್ದರೋ, ಯಾರು ಇದುವರೆಗೂ ಊರೊಳಗೆ ಇದ್ದರೋ ಅವರಿಂದ. ಈ ಆತಂಕ ಇವುಗಳಿಂದ ವಂಚಿತರಾದವರನ್ನೂ ಬಿಟ್ಟಿಲ್ಲ ಎನ್ನುವುದನ್ನು ಈ ಮಹಾ ಪ್ರಬಂಧ ವಿಸ್ತೃತವಾಗಿ ಚರ್ಚಿಸಿದೆ. ಈ ಚರ್ಚೆಯಿಂದ ಕೆಲವೊಂದು ಫಲಿತಗಳನ್ನೂ ಕಂಡುಕೊಂಡಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಕನ್ನಡದ ಪ್ರಾದೇಶಿಕ ಕಾದಂಬರಿಗಳು ಶಿಕ್ಷಣ, ಆಧುನಿಕತೆ, ವಸಾಹತುಶಾಹಿಯ ಬಗ್ಗೆ ಮರು ಚಿಂತನೆಯನ್ನು ಮಾಡುವಂತೆ ಪ್ರೇರೇಪಿಸಿದ್ದು. ಎರಡನೆಯದು ಇಂದಿಗೂ ನಮ್ಮ ಸಮಾಜ 'ಮನು'ವನ್ನು ಜೀವಂತವಾಗಿಟ್ಟಿದೆ ಎಂಬುದನ್ನು ಅಧ್ಯಯನಕ್ಕೆ ಆಯ್ದುಕೊಂಡ ಕಾದಂಬರಿಗಳು ಒಪ್ಪಿಕೊಂಡಿವೆ ಎಂಬುದು. ಮೂರನೆಯದು ಸಾಹಿತ್ಯಿಕ ಜವಾಬ್ದಾರಿಯ ಬಗ್ಗೆ ಮರು ಚಿಂತನೆ ನಡೆಸಬೇಕು ಎಂಬ ಆಶಯ.

ಇವುಗಳೆಲ್ಲವುಗಳ ಕಾರಣಕ್ಕಾಗಿ ರಾಜಶೇಖರನ ಅಧ್ಯಯನದ ಕ್ರಮ ಜನಮುಖಿಯಾದ ವಿಧಾನ ಎನ್ನುವುದರಲ್ಲಿ ಯಾವ ಅನುಮಾನಗಳು ಇಲ್ಲ. ಹೇಳುವುದರಲ್ಲಿ ಅವಸರವಿರಬಹುದು, ಆದರೆ ಆಶಯಗಳು ಪ್ರಜಾಪ್ರಭುತ್ವದ ಜೀವಂತಿಕೆಗಾಗಿ ಎನ್ನುವುದನ್ನು ಗಮನಿಸಬಹುದಾಗಿದೆ. ಒಂದು ಕಥೆಯನ್ನು ಬರೆಯುವಲ್ಲಿ ಎದುರಿಸದ ಸಮಸ್ಯೆಗಳನ್ನು ರಾಜಶೇಖರ ಇಲ್ಲಿ ಎದುರಿಸಿದ್ದಾನೆ. ಆತನಿಗೆ ಎದುರಾದ ವಿಮರ್ಶಾ ಪರಿಭಾಷೆ, 'ಇಸಂ'ಗಳ ಗತ ತಾರ್ಕಿಕ ನಿಲುವುಗಳು, ಮಹಿಳಾವಾದ, ವಸಾಹತುಶಾಹಿಯ ಪರಿಕಲ್ಪನೆಗಳು ಪ್ರಾಥಮಿಕ ಹಂತದಲ್ಲಿಯೇ ಉಳಿದುಬಿಟ್ಟಿವೆ. ಅವುಗಳ ಆಳ ಅಧ್ಯಯನ ಈ ಮಹಾ ಪ್ರಬಂಧಕ್ಕೆ ಬೇರೊಂದು ಆಯಾಮವನ್ನೇ ಕೊಡುತ್ತಿತ್ತು. ಅಂತಹ ಸಾಧ್ಯತೆಗಳನ್ನು ಮುಂದಿನ ಬರವಣಿಗೆಯಲ್ಲಿ ನಿರೀಕ್ಷಿಸಬಹುದಾಗಿದೆ. ಮಾಡಿದ ಪ್ರಯತ್ನ ದೊಡ್ಡದು. ಒಂದು ತಲೆಮಾರುಗಳ ಚರಿತ್ರೆಯನ್ನು ಈ ಮೂಲಕ ಕಟ್ಟಿಕೊಡುವ ಪ್ರಯತ್ನದಲ್ಲಿ ಡಾ.ರಾಜಶೇಖರ ಯಶಸ್ವಿಯಾಗಿದ್ದಾರೆ ಎನ್ನುವ ಅಭಿಪ್ರಾಯದೊಂದಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಪರಾಮರ್ಶನ ಗ್ರಂಥಗಳು**


1. ರಾಜಶೇಖರ ಹಳಮನಿ (2011) ಕನ್ನಡ ಕಾದಂಬರಿಗಳಲ್ಲಿ ತಲೆಮಾರಿನ ಸಂಘರ್ಷ, ನೆಲಮನೆ ಪಬ್ಲಿಕೇಷನ್ ಹೌಸ್, ಬೆಂಗಳೂರು.
2. ಗುಲ್ವಾಡಿ ವೆಂಕಟರಾವ್ (2012) ಇಂದಿರಾಬಾಯಿ, ಕಮಲ್ ಇಂಪ್ರೆಷನ್, ಮೈಸೂರು
3. ಕುವೆಂಪು (2007) ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು
4. ಶಿವರಾಮ ಕಾರಂತ (2010) ಮರಳಿ ಮಣ್ಣಿಗೆ, ಸ್ವಪ್ನಬುಕ್ ಹೌಸ್, ಬೆಂಗಳೂರು
5. ಕುವೆಂಪು (2007) ಕಾನೂರು ಹೆಗ್ಗಡಿತಿ, ಉದಯರವಿ ಪ್ರಕಾಶನ, ಮೈಸೂರು
6. ಶಂಕರ ಮೊಕಾಶಿ ಪುಣೇಕರ (1944) ಗಂಗವ್ವ–ಗಂಗಾಮಾಯಿ, ಸುರುಚಿ ಪ್ರಕಾಶನ, ಮೈಸೂರು
7. ಲಂಕೇಶ ಪಿ (2003) ಮುಸ್ಸಂಜೆಯ ಕಥಾ ಪ್ರಸಂಗ, ಪತ್ರಿಕೆ ಪ್ರಕಾಶನ, ಬೆಂಗಳೂರು
8. ಶ್ರೀಕೃಷ್ಣ ಆಲನಹಳ್ಳಿ (1985) ಪರಸಂಗದ ಗಂಡೆತಿಮ್ಮ, ಐಬಿಎಚ್ ಪ್ರಕಾಶನ, ಬೆಂಗಳೂರು
9. ಕೃಷ್ಣ ಪ್ರಸಾದ (2008) ಬೀಜ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
10. ಬಸವರಾಜ ಕಟ್ಟೀಮನಿ (2009) ಮಾಡಿ ಮಡಿದವರು, ಸ್ವಪ್ನ ಬುಕ್ ಹೌಸ್, ಬೆಂಗಳೂರು
11. ವೀರಭದ್ರಪ್ಪ ಕುಂ (2011) ಶಾಮಣ್ಣ, ಸಪ್ನ ಬುಕ್ ಹೌಸ್, ಬೆಂಗಳೂರು
12. ಗೀತಾ ನಾಗಭೂಷಣ (2007) ಬದುಕು, ಲೋಹಿಯಾ ಪ್ರಕಾಶನ ಬಳ್ಳಾರಿ
13. ಮಲ್ಲಿಕಾರ್ಜುನ ಹಿರೇಮಠ (2013) ಹವನ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ
14. ಲಕ್ಷ್ಮಣ (1994) ಬದುಕು, ಸಮತಾ ಪ್ರಕಾಶನ, ಬೆಂಗಳೂರು